2016 ಕ.ತೀ.ವ 1360

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇಗೌಡ

**ಚಂದ್ರಶೇಖರ್ –ವಿರುದ್ಧ– ಡಾ॥ ಸಂಜಯ್ ಮೋಹನ್‌ರಾವ್***

**ನ್ಯಾಯಾಲಯದ ನಿಂದನೆ ಅಧಿನಿಯಮದ 11 ಹಾಗೂ 12ನೇ ಪ್ರಕರಣಗಳಡಿಯಲ್ಲಿ ಅರ್ಜಿಗಳು.**

**ದಿನಾಂಕ 30.6.2014ರಂದು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣವು ಮೇಲ್ಮನವಿ ಸಂಖ್ಯೆ 347/2013 ಹಾಗೂ 366/2013 ಪ್ರಕರಣಗಳಲ್ಲಿ ನೀಡಿದ ಆದೇಶವನ್ನು ಎದುರುದಾರರು ಪಾಲಿಸಿಲ್ಲದ ಕಾರಣ ಅವರ ವಿರುದ್ಧ ನ್ಯಾಯಾಲಯ ನಿಂದನಾ ಕಾಯಿದೆಯಡಿಯಲ್ಲಿ ಶಿಕ್ಷಿಸುವಂತೆ ಕೋರಿ ಸದರಿ ನ್ಯಾಯಾಲಯ ನಿಂದನಾ ಅರ್ಜಿ.**

**ನ್ಯಾಯಾಧಿಕರಣವು ಕಾಯಿದೆಯ ಕಲಂ 105, 107, 106 ಅಥವಾ 108ರಡಿಯಲ್ಲಿ ನೀಡಿದ ಆದೇಶವನ್ನು ಸಿವಿಲ್ ನ್ಯಾಯಾಲಯಗಳ ಮಾದರಿಯಲ್ಲಿಯೇ ಜಾರಿ ಮಾಡಲು ನ್ಯಾಯಾಧಿಕರಣಕ್ಕೆ ಅವಕಾಶವಿರುವ ಕಾರಣ 1974ರ ನ್ಯಾಯಾಲಯದ ನಿಂದನಾ ಕಾಯಿದೆಯಡಿಯಲ್ಲಿ ಸದರಿ ಅರ್ಜಿಯನ್ನು ಪುರಸ್ಕರಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟು ಉಚ್ಚ ನ್ಯಾಯಾಲಯವು ಸದರಿ ಅರ್ಜಿಗಳನ್ನು ವಜಾಗೊಳಿಸಿದೆ.**

ದೂರುದಾರರ ಪರ: ಶ್ರೀ ಬ್ರಿಜೇಶ್ ಪಾಟೀಲ್, ವಕೀಲರು.
ಆಪಾದಿತರ ಪರ: ಶ್ರೀ ಬಿ.ಬಿ. ಬಜಂತ್ರಿ, ವಕೀಲರು.

*ಸಿ.ಸಿ.ಸಿ. ಸಂಖ್ಯೆ 430/2015, ಇದರೊಂದಿಗೆ ಇತರೆ, ದಿನಾಂಕ: 15ನೇ ಜೂನ್, 2015.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎನ್. ಕುಮಾರ್:**

ಕರ್ನಾಟಕ ಅಪೀಲು ನ್ಯಾಯಾಧಿಕರಣ, ಬೆಂಗಳೂರು (ಬೆಳಗಾವಿ ಕ್ಯಾಂಪ್ ಕೇಸ್) ಇವರು ಅಪೀಲು ಸಂಖ್ಯೆ 347/2013 ಮತ್ತು 366/2013ರ ಪ್ರಕರಣಗಳಲ್ಲಿ ನೀಡಿದ ದಿನಾಂಕ 30.06.2014ರ ಆದೇಶವನ್ನು ಪಾಲಿಸಿಲ್ಲವೆಂದು ಆಪಾದಿಸಿ, ಪ್ರತ್ಯಪೀಲುದಾರ – ಆಪಾದಿತನ ವಿರುದ್ಧ ನಿಂದನಾ ವ್ಯವಹರಣೆಗಳನ್ನು ಪ್ರಾರಂಭಿಸಲು ಮತ್ತು ಕಾನೂನಿಗೆ ಅನುಸಾರವಾಗಿ ಅವರನ್ನು ಶಿಕ್ಷೆಗೆ ಒಳಪಡಿಸಲು ಈ ನಿಂದನಾ ಅರ್ಜಿಗಳನ್ನು ಸಲ್ಲಿಸಿದ್ದಾರೆ.

2. ಕರ್ನಾಟಕ ಅಪೀಲು ನ್ಯಾಯಾಧಿಕರಣವು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ 105ನೇ ಪ್ರಕರಣದಡಿ, ತನ್ನ ಅಪೀಲು ಅಧಿಕಾರ ವ್ಯಾಪ್ತಿಯಲ್ಲಿ ಆದೇಶವನ್ನು ಹೊರಡಿಸಿದೆ. ಸದರಿ ಉಪಬಂಧವನ್ನು ಈ ಕೆಳಗಿನಂತೆ ಓದಲಾಗಿರುತ್ತದೆ:

**ನ್ಯಾಯಾಧಿಕರಣಕ್ಕೆ ಅಪೀಲುಗಳು**: ಯಾರೇ ಬಾಧಿತ ವ್ಯಕ್ತಿಯು,–

*(ಎ) 71ನೇ ಪ್ರಕರಣದ (1)ನೇ ಉಪ–ಪ್ರಕರಣದ (ಎ) ಖಂಡದಡಿ ರಿಜಿಸ್ಟ್ರಾರರು ಕೈಗೊಂಡ ಯಾವುದೇ ತೀರ್ಮಾನ; ಅಥವಾ*

*(ಬಿ) 71ನೇ ಪ್ರಕರಣದ (1)ನೇ ಉಪ–ಪ್ರಕರಣದ (ಬಿ)ಖಂಡದಡಿ ಆ ಸಂಬಂಧ, ರಾಜ್ಯ ಸರ್ಕಾರವು ಅಧಿಕಾರಗಳನ್ನು ನಿಹಿತಗೊಳಿಸಿದ ವ್ಯಕ್ತಿಯ ಯಾವುದೇ ತೀರ್ಮಾನ; ಅಥವಾ*

*(ಸಿ) 71ನೇ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದಡಿ ಮಧ್ಯಸ್ಥಿಕೆದಾರನ ಯಾವುದೇ ಐತೀರ್ಪು; ಅಥವಾ*

*(ಡಿ) 74ನೇ ಪ್ರಕರಣದ (2)ನೇ ಉಪ–ಪ್ರಕರಣದ (ಎಫ್) ಖಂಡದಡಿ ಸಮಾಪಕನ ಯಾವುದೇ ನಿರ್ಧಾರ; ಅಥವಾ*

*(ಇ) 69 ಮತ್ತು 71ನೇ ಪ್ರಕರಣಗಳಡಿ ಮಾಡಿರಬಹುದಾದ ಯಾವುದೇ ಆದೇಶ, ತೀರ್ಮಾನ ಅಥವಾ ಐತೀರ್ಪನ್ನು ಅಮಲ್ಜಾರಿ ಮಾಡುವಲ್ಲಿ ಯಾವುದೇ ವಿಳಂಬ ಅಥವಾ ಅಡೆತಡೆಯನ್ನು ನಿವಾರಿಸುವ ದೃಷ್ಟಿಯಿಂದ 103ನೇ ಪ್ರಕರಣದಡಿ ಮಾಡಲಾದ ಯಾವುದೇ ಆದೇಶ; ಸಂದರ್ಭಾನುಸಾರ ತೀರ್ಮಾನ, ಐತೀರ್ಪು ಅಥವಾ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು.*

*(ಎಫ್) 69ನೇ ಪ್ರಕರಣದಡಿ ಹೊರಡಿಸಲಾದ ಯಾವುದೇ ಆದೇಶ; ಸಂದರ್ಭಾನುಸಾರ ತೀರ್ಮಾನ, ಐತೀರ್ಪು ಅಥವಾ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು.*

*(2) ಅಪೀಲಿನ ಜೊತೆಯಲ್ಲಿ, ಆದೇಶ, ತೀರ್ಮಾನ ಅಥವಾ ಐತೀರ್ಪಿಗೆ ಸಂಬಂಧಪಟ್ಟಂತೆ, ಬಾಕಿ ಇರುವ ಮೊತ್ತದ ಶೇಕಡಾ ಇಪ್ಪತ್ತೈದರಷ್ಟನ್ನು ಸಂಬಂಧಿಸಿದ ಸಂಘದಲ್ಲಿ ಠೇವಣಿ ಮಾಡಿರುವುದಕ್ಕೆ ತೃಪ್ತಿಕರವಾದ ರುಜುವಾತನ್ನು ಸಲ್ಲಿಸಿದ ಹೊರತು (1)ನೇ ಉಪ–ಪ್ರಕರಣದಡಿ ಅಪೀಲು ಪ್ರಾಧಿಕಾರವು ಹಣ ಸಂದಾಯಕ್ಕಾಗಿ, ಆದೇಶ, ತೀರ್ಮಾನ ಅಥವಾ ಐತೀರ್ಪಿನ ವಿರುದ್ಧ*

*ಯಾವುದೇ ಅಪೀಲನ್ನು ಪರಿಗಣಿಸತಕ್ಕದ್ದಲ್ಲ. ಅಪೀಲನ್ನು ವಿಲೇ ಮಾಡಿದ ನಂತರ, ಆ ರೀತಿ ಠೇವಣಿ ಮಾಡಲಾದ ಮೊತ್ತವನ್ನು ಅಪೀಲುದಾರನು ಪಾವತಿಸಬಹುದಾದ ಮೊತ್ತಕ್ಕೆ ಸರಿ ಹೊಂದಿಸಿಕೊಳ್ಳತಕ್ಕದ್ದು ಮತ್ತು ಅಪೀಲುದಾರನು ಯಾವುದೇ ಮೊತ್ತವನ್ನು ಪಾವತಿಸುವ ಅಗತ್ಯವಿಲ್ಲದಿದ್ದಲ್ಲಿ, ಆ ರೀತಿ ಠೇವಣಿ ಮಾಡಲಾದ ಸದರಿ ಮೊತ್ತವನ್ನು ಸಂಘವು ಅವನಿಗೆ ಮರುಪಾವತಿ ಮಾಡತಕ್ಕದ್ದು.*

3. ಅಧಿನಿಯಮದ 101ನೇ ಪ್ರಕರಣವು ಆದೇಶಗಳ ಅಮಲ್ಜಾರಿಯನ್ನು ಉಪಬಂಧಿಸುತ್ತದೆ. ಅದನ್ನು ಈ ಕೆಳಗಿನಂತೆ ಓದಲಾಗುತ್ತದೆ:

***ಆದೇಶಗಳ ಜಾರಿ, ಇತ್ಯಾದಿ:*** *(1) 69ನೇ ಪ್ರಕರಣದ (1)ನೇ ಉಪ–ಪ್ರಕರಣದಡಿ ಅಥವಾ 99ನೇ ಪ್ರಕರಣದಡಿ ರಿಜಿಸ್ಟ್ರಾರರಿಂದ ಮಾಡಲಾದ ಪ್ರತಿಯೊಂದು ಆದೇಶ, 71ನೇ ಪ್ರಕರಣದಡಿ ಮಾಡಲಾದ ಪ್ರತಿಯೊಂದು ತೀರ್ಮಾನ ಅಥವಾ ಐತೀರ್ಪು, 74ನೇ ಪ್ರಕರಣದಡಿ ಸಮಾಪಕನಿಂದ ಮಾಡಲಾದ ಪ್ರತಿಯೊಂದು ಆದೇಶ ಮತ್ತು 105 ಹಾಗೂ 107ರಡಿ ನ್ಯಾಯಾಧಿಕರಣದಿಂದ ಮಾಡಲಾದ ಪ್ರತಿಯೊಂದು ಆದೇಶ ಹಾಗೂ 106 ಅಥವಾ 108ರಡಿ ಮಾಡಲಾದ ಪ್ರತಿಯೊಂದು ಆದೇಶವು ಯಾರಿಗೆ ಸಂಬಂಧಿಸಿದಂತೆ ಆದೇಶ, ತೀರ್ಮಾನ ಅಥವಾ ಐತೀರ್ಪನ್ನು ನೀಡಲಾಗಿದೆಯೋ ಅಥವಾ ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯನ್ನು ಬದ್ಧಗೊಳಿಸುವ, ಈ ಅಧಿನಿಯುಮದ ಇತರ ಯಾವುದೇ ಉಪಬಂಧಕ್ಕೆ ಒಳಪಟ್ಟಿರತಕ್ಕದ್ದು ಹಾಗೂ ಅದನ್ನು ಪಾಲಿಸದಿದ್ದಲ್ಲಿ, –*

*(ಎ) ರಿಜಿಸ್ಟ್ರಾರರು ಸಹಿ ಮಾಡಿದ ಅಥವಾ ಈ ಸಂಬಂಧ ಅವರು ಅಧಿಕಾರ ನೀಡಿದ ಯಾರೇ ವ್ಯಕ್ತಿಯು ಸಹಿ ಮಾಡಿದ ಪ್ರಮಾಣಪತ್ರವನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯೆಂದು*

*ಭಾವಿಸತಕ್ಕದ್ದು ಮತ್ತು ಅದನ್ನು ಅಂಥ ನ್ಯಾಯಾಲಯದ ಡಿಕ್ರಿಯೆಂದು ಅದೇ ರೀತಿಯಲ್ಲಿ ಅಮಲ್ಜಾರಿ ಮಾಡತಕ್ಕದ್ದು; ಅಥವಾ*

*(ಬಿ) ಭೂ ಕಂದಾಯದ ಬಾಕಿಗಳನ್ನು ವಸೂಲು ಮಾಡಲು, ಕಾನೂನಿಗೆ ಅನುಸಾರವಾಗಿ, ಸದ್ಯಕ್ಕೆ ಜಾರಿಯಲ್ಲಿರುವ ನಿಯಮಗಳಡಿ ಅಮಲ್ಜಾರಿ ಮಾಡತಕ್ಕದ್ದು:*

*ಪರಂತು, ಯಾವುದೇ ಮೊತ್ತವನ್ನು ಅಂಥ ರೀತಿಯಲ್ಲಿ ವಸೂಲಿಗಾಗಿ ಅರ್ಜಿ ಸಲ್ಲಿಸತಕ್ಕದ್ದು,-*

*(i) ಅರ್ಜಿಯನ್ನು ಜಿಲ್ಲಾಧಿಕಾರಿಗೆ ಸಲ್ಲಿಸತಕ್ಕದ್ದು ಮತ್ತು ಅದರೊಂದಿಗೆ ರಿಜಿಸ್ಟ್ರಾರರು ಅಥವಾ ಈ ಸಂಬಂಧ, ಅವರಿಂದ ಅಧಿಕಾರ ನೀಡಲಾದ ಯಾರೇ ವ್ಯಕ್ತಿಯು ಸಹಿ ಮಾಡಿದ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು;*

*(ii) ಆದೇಶ, ತೀರ್ಮಾನ ಅಥವಾ ಐತೀರ್ಪಿನಲ್ಲಿ ನಿಗದಿತ ದಿನಾಂಕದಿಂದ ಹನ್ನೆರಡು ವರ್ಷಗಳೊಳಗಾಗಿ ಹಾಗೂ ಅಂಥ ದಿನಾಂಕವನ್ನು ನಿಗದಿಪಡಿಸಿರದಿದ್ದಲ್ಲಿ, ಸಂದರ್ಭಾನುಸಾರ ಆದೇಶ, ತೀರ್ಮಾನ ಅಥವಾ ಐತೀರ್ಪಿನ ದಿನಾಂಕದಿಂದ; ಅಥವಾ*

*(ಸಿ) ಯಾರಿಗೆ ಸಂಬಂಧಿಸಿದಂತೆ ಆದೇಶ, ತೀರ್ಮಾನ ಅಥವಾ ಐತೀರ್ಪನ್ನು ನೀಡಲಾಗಿದೆಯೋ ಅಥವಾ ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯ ಅಥವಾ ಸಹಕಾರ ಸಂಘದ ಜಫ್ತಿ ಮತ್ತು ಮಾರಾಟದ ಮೂಲಕ ಅಥವಾ ಜಫ್ತಿ ಮಾಡದೆಯೇ, ರಿಜಿಸ್ಟ್ರಾರರು ಅಥವಾ ಈ ಸಂಬಂಧದಲ್ಲಿ, ರಿಜಿಸ್ಟ್ರಾರರಿಂದ ಅಧಿಕಾರ ನೀಡಲಾದ, ಅವರ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಯಾರೇ ಇತರ ವ್ಯಕ್ತಿಯು ಜಾರಿಗೊಳಿಸತಕ್ಕದ್ದು.*

(2)(ಎ) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಆದೇಶ, ತೀರ್ಮಾನ ಅಥವಾ ಐತೀರ್ಪಿನ ಅಮಲ್ಜಾರಿ, ನಿರ್ವಹಣೆ ಅಥವಾ ಮನವರಿಕೆ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿರುವ ಅಥವಾ (1)ನೇ ಉಪ–ಪ್ರಕರಣದ (ಸಿ) ಖಂಡದ ಅನುಸರಣೆಯಲ್ಲಿ ಅಂಥ ಆದೇಶ, ತೀರ್ಮಾನ ಅಥವಾ ಐತೀರ್ಪಿನ ಅಮಲ್ಜಾರಿಯಲ್ಲಿ ನಿರ್ಧರಿಸಲಾದ ಮಾರಾಟದ ಸ್ಥಿರೀಕರಣ ಅಥವಾ ತಳ್ಳಿಹಾಕುವುದಕ್ಕೆ ಸಂಬಂಧಪಡುವ ಅಥವಾ 103ನೇ ಪ್ರಕರಣದಡಿ ಮಾಡಲಾದ ಯಾವುದೇ ಸ್ವತ್ತಿನ ಜಪ್ತಿಗೆ ಯಾವುದೇ ಕ್ಲೇಮು ಅಥವಾ ಆಕ್ಷೇಪಣೆಗೆ ಸಂಬಂಧಿಸುವ ಪ್ರತಿಯೊಂದು ಪ್ರಶ್ನೆಯನ್ನು ಅಥವಾ ಸದರಿ (ಸಿ)ಖಂಡದ ಅನುಸರಣೆಯಲ್ಲಿ ಯಾರ ಮುಂದೆ ಅಂಥ ಪ್ರಶ್ನೆ ಉದ್ಭವವಾಗುವುದೋ ಅವರು ಸದರಿ (ಸಿ)ಖಂಡದಡಿ ರಿಜಿಸ್ಟ್ರಾರರು ಅಥವಾ ಅವರ ಅಧೀನದಲ್ಲಿ ಕಾರ್ಯ ನಿರ್ವಹಿಸುವ, ಅವರು ಅಧಿಕಾರ ನೀಡಿದ ಇತರ ಯಾರೇ ವ್ಯಕ್ತಿಯ ಆದೇಶದ ಮೂಲಕ ನಿರ್ಧರಿಸತಕ್ಕದ್ದು (ಈ ಪ್ರಕರಣದಲ್ಲಿ ಇನ್ನು ಮುಂದೆ "ಅಧಿಕಾರ ನೀಡಲಾದ ವ್ಯಕ್ತಿ" ಎಂದು ಕರೆಯಲಾಗಿದೆ).

(ಬಿ) (i) 103ನೇ ಪ್ರಕರಣದಡಿ ಮಾಡಲಾದ ಯಾವುದೇ ಸ್ವತ್ತಿನ ಜಪ್ತಿಗಾಗಿ ಅಥವಾ (1)ನೇ ಉಪ–ಪ್ರಕರಣದ (ಸಿ)ಖಂಡದ ಅನುಸರಣೆಯಲ್ಲಿ ಅಮಲ್ಜಾರಿಗಾಗಿ, ಅದರ ವಿರುದ್ಧ ಯಾವುದೇ ಕ್ಲೇಮನ್ನು ಮಂಡಿಸಲಾಗಿದ್ದಲ್ಲಿ ಅಥವಾ ಅದಕ್ಕೆ ಯಾವುದೇ ಆಕ್ಷೇಪಣೆಯನ್ನು ಮಾಡಲಾಗಿದ್ದಲ್ಲಿ, ಸದರಿ ಸ್ವತ್ತು ಅಂಥ ಜಪ್ತಿಗೆ ತಕ್ಕದ್ದಲ್ಲವೆಂಬ ಕಾರಣಕ್ಕಾಗಿ ರಿಜಿಸ್ಟ್ರಾರರು ಅಥವಾ ಅವರು ಅಧಿಕಾರ ನೀಡಿದ ವ್ಯಕ್ತಿಯು ಕ್ಲೇಮು ಅಥವಾ ಆಕ್ಷೇಪಣೆಯನ್ನು ತನಿಖೆ ಮಾಡಲು ಮುಂದುವರೆಯತಕ್ಕದ್ದು:

*ಪರಂತು, ಕ್ಲೇಮು ಅಥವಾ ಆಕ್ಷೇಪಣೆಯು ಉದ್ದೇಶ ಪೂರ್ವಕವಾಗಿ ಅಥವಾ ಅನವಶ್ಯಕವಾಗಿ ವಿಳಂಬವಾಗಿರುತ್ತದೆಯೆಂದು ರಿಜಿಸ್ಟ್ರಾರರು ಅಥವಾ ಅವರು ಅಧಿಕಾರ ನೀಡಿದ ವ್ಯಕ್ತಿಯು ಪರಿಗಣಿಸಿದಲ್ಲಿ, ಅವರು ಅಂಥ ತನಿಖೆಯನ್ನು ನಿರಾಕರಿಸಿ ಆದೇಶ ಮಾಡತಕ್ಕದ್ದು.*

*(ii) ಸದರಿ ತನಿಖೆಯ ಆಧಾರದ ಮೇಲೆ, ರಿಜಿಸ್ಟ್ರಾರ್ ಅಥವಾ ಅವರು ಅಧಿಕಾರ ನೀಡಿದ ವ್ಯಕ್ತಿಯು, ಕ್ಲೇಮು ಅಥವಾ ಆಕ್ಷೇಪಣೆಯಲ್ಲಿ ಹೇಳಲಾದ ಕಾರಣಕ್ಕಾಗಿ ಅಂಥ ಸ್ವತ್ತು, ಜಪ್ತಿಯ ದಿನಾಂಕದಂದು, ಯಾರಿಗೆ ಸಂಬಂಧಿಸಿದಂತೆ ಆದೇಶ, ತೀರ್ಮಾನ ಅಥವಾ ಐತೀರ್ಪನ್ನು ನೀಡಲಾಗಿದೆಯೋ ಅಥವಾ ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯ ಅಥವಾ ಸಹಕಾರ ಸಂಘದ (ಇನ್ನು ಮುಂದೆ ಈ ಪ್ರಕರಣದಲ್ಲಿ "ಐತೀರ್ಪು ಋಣಿ" ಎಂದು ಕರೆಯಲಾಗಿದೆ) ಅಥವಾ ತೀರ್ಪುಋಣಿಗೆ ನಂಬಿಕೆಯಿರುವ ಯಾರೇ ವ್ಯಕ್ತಿಯು ಸ್ವಾಧೀನದಲ್ಲಿರಲಿಲ್ಲ ಅಥವಾ ಗೇಣಿದಾರನ ಅಧಿಭೋಗದಲ್ಲಿ ಅಥವಾ ತೀರ್ಪು ಋಣಿಗೆ ಬಾಡಿಗೆಯನ್ನು ಸಂದಾಯ ಮಾಡುವ ಇತರ ವ್ಯಕ್ತಿಯ ಸ್ವಾಧೀನದಲ್ಲಿ ಇರಲಿಲ್ಲ ಅಥವಾ ಸದರಿ ದಿನಾಂಕದಂದು ತೀರ್ಪುಋಣಿಯ ಸ್ವಾಧೀನದಲ್ಲಿದ್ದು, ಅದು ಅವರ ಹೆಸರಿನಲ್ಲಿರಲಿಲ್ಲ ಅಥವಾ ಅದು ಅವರ ಸ್ವಂತ ಸ್ವತ್ತಾಗಿರಲಿಲ್ಲ. ಆದರೆ, ಅವರ ಹೆಸರಿನಲ್ಲಿ ಅಥವಾ ಅವರಿಗೆ ನಂಬಿಕೆಯಿರುವ ಯಾರೇ ಇತರ ವ್ಯಕ್ತಿಯ ಹೆಸರಿನಲ್ಲಿ ಅಥವಾ ಭಾಗಶಃ ಅವರ ಮತ್ತು ಭಾಗಶಃ ಇತರ ಯಾರೇ ವ್ಯಕ್ತಿಯ ಹೆಸರಿನಲ್ಲಿದೆಯೆಂದು ಮನದಟ್ಟಾಗಿದ್ದಲ್ಲಿ ರಿಜಿಸ್ಟ್ರಾರರು ಅಥವಾ ಅವರು ಅಧಿಕಾರ ನೀಡಿದ ವ್ಯಕ್ತಿಯು ಪೂರ್ಣವಾಗಿ ಅಥವಾ ಅವನು ಯೋಗ್ಯವೆಂದು ಭಾವಿಸುವ ಮಟ್ಟಿಗೆ, ಸ್ವತ್ತನ್ನು ಜಪ್ತಿಯಿಂದ ಬಿಡುಗಡೆ ಮಾಡಿ, ಆದೇಶ ಮಾಡತಕ್ಕದ್ದು.*

*(iii) ರಿಜಿಸ್ಟ್ರಾರರಿಗೆ ಅಥವಾ ಅಧಿಕಾರ ನೀಡಲಾದ ವ್ಯಕ್ತಿಗೆ, ಸದರಿ ದಿನಾಂಕದಂದು ಸ್ವತ್ತು ತೀರ್ಪುಋಣಿಯ ಸ್ವಂತ ಸ್ವತ್ತಾಗಿ ಅವನ ಸ್ವಾಧೀನದಲ್ಲಿತ್ತೇ ಹೊರತು ಯಾರೇ ಇತರ ವ್ಯಕ್ತಿಯದಾಗಿರಲಿಲ್ಲ ಅಥವಾ ಅದು ಗೇಣಿದಾರನ ಅಥವಾ ಅವನಿಗೆ ಬಾಡಿಗೆಯನ್ನು ಸಂದಾಯ ಮಾಡುವ ಇತರ ವ್ಯಕ್ತಿಯ ಅಧಿಭೋಗದಲ್ಲಿರಲಿಲ್ಲ ಎಂದು ಮನದಟ್ಟಾಗಿದ್ದಲ್ಲಿ, ರಿಜಿಸ್ಟ್ರಾರ್ ಅಥವಾ ಅಧಿಕಾರ ನೀಡಲಾದ ವ್ಯಕ್ತಿಯು ಕ್ಲೇಮನ್ನು ತಳ್ಳಿಹಾಕತಕ್ಕದ್ದು;*

*(iv) ಕ್ಲೇಮು ಅಥವಾ ಆಕ್ಷೇಪಣೆಯನ್ನು ಮಂಡಿಸಿದ್ದಲ್ಲಿ, ಯಾರಿಗೆ ಸಂಬಂಧಿಸಿದಂತೆ ಆದೇಶ ಮಾಡಲಾಗಿದೆಯೋ ಆ ಪಕ್ಷಕಾರನು ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗಾಗಿ, ವಿವಾದದಲ್ಲಿರುವ ಸ್ವತ್ತಿಗಾಗಿ ಅವನು ಕ್ಲೇಮು ಮಾಡುವಂಥ ಹಕ್ಕನ್ನು ಸ್ಥಾಪಿಸಲು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾನೆ; ಆದರೆ ಅಂಥ ದಾವೆಯ ಫಲಿತಾಂಶ, ಯಾವುದಾದರೂ ಇದ್ದಲ್ಲಿ, ಅದಕ್ಕೊಳಪಟ್ಟು ರಿಜಿಸ್ಟ್ರಾರ್ ಅಥವಾ ಅಧಿಕಾರ ನೀಡಲಾದ ವ್ಯಕ್ತಿಯು ಆದೇಶವು ನಿರ್ಣಾಯಕವಾಗಿರತಕ್ಕದ್ದು.*

4. ಮೇಲೆ ಹೇಳಲಾದ ಎರಡು ಉಪಬಂಧಗಳನ್ನು ಒಟ್ಟಿಗೆ ಓದುವುದರಿಂದ 105 ಮತ್ತು 107, 106 ಅಥವಾ 108ನೇ ಪ್ರಕರಣಗಳಡಿ ನ್ಯಾಯಾಧಿಕರಣದಿಂದ ಮಾಡಲಾದ ಪ್ರತಿಯೊಂದು ಆದೇಶವು ಯಾರಿಗೆ ಸಂಬಂಧಿಸಿದಂತೆ ಆದೇಶ, ತೀರ್ಮಾನ ಅಥವಾ ಐತೀರ್ಪನ್ನು ನೀಡಲಾಗಿರುತ್ತದೆಯೋ ಅಥವಾ ಜಾರಿಯಾಗಿರುತ್ತದೆಯೋ ಆ ವ್ಯಕ್ತಿಯನ್ನು ಬದ್ಧಗೊಳಿಸುತ್ತದೆಯೆಂಬುದು ಸ್ಪಷ್ಟವಾಗಿದೆ ಮತ್ತು ಅದನ್ನು ಪಾಲಿಸದಿದ್ದಾಗ ಅದನ್ನು ಅಂಥ ನ್ಯಾಯಾಲಯದ ಡಿಕ್ರಿಯ ರೀತಿಯಲ್ಲಿಯೇ ಜಾರಿಗೊಳಿಸತಕ್ಕದ್ದು. ಎಂದರೆ, ಅದನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯೆಂದು ಭಾವಿಸತಕ್ಕದ್ದು ಮತ್ತು ಅದನ್ನು ಅಂಥ ನ್ಯಾಯಾಲಯದ ಡಿಕ್ರಿಯಂತೆ,

ಅದೇ ರೀತಿಯಲ್ಲಿ ಅಮಲ್ಜಾರಿ ಮಾಡತಕ್ಕದ್ದು. ಇದಕ್ಕೆ ಪೂರೈಸಬೇಕಾದ ಒಂದೇ ಷರತ್ತೆಂದರೆ, ಆದೇಶದ ನಂತರ ಅದನ್ನು ಪಾಲಿಸದಿದ್ದಲ್ಲಿ, ಡಿಕ್ರಿದಾರನು ಪ್ರಮಾಣಪತ್ರದ ನೀಡಿಕೆಗಾಗಿ ರಿಜಿಸ್ಟ್ರಾರರನ್ನು ಸಂಪರ್ಕಿಸಬೇಕು ಅಥವಾ ಅವರಿಂದ ಅಧಿಕಾರ ನೀಡಲಾದ ಯಾರೇ ವ್ಯಕ್ತಿಯನ್ನು ಅಂಥ ಪ್ರಮಾಣಪತ್ರದ ನೀಡಿಕೆಗಾಗಿ ಸಂಪರ್ಕಿಸಬೇಕು ಹಾಗೂ ನೀಡಲಾದ ಆದೇಶವನ್ನು ಪಾಲಿಸಿಲ್ಲವೆಂಬುದನ್ನು ತೋರಿಸುವ ಆ ಪ್ರಮಾಣಪತ್ರವನ್ನು ಒಮ್ಮೆ ಹಾಜರುಪಡಿಸಿದರೆ, ಆಗ ಸಿವಿಲ್ ನ್ಯಾಯಾಲಯವು ಆ ನ್ಯಾಯಾಲಯದ ಡಿಕ್ರಿಗೆ ಒಳಪಟ್ಟು ಸದರಿ ಆದೇಶವನ್ನು ಜಾರಿ ಮಾಡತಕ್ಕದ್ದು. ಹಾಗಿದ್ದರೂ, ಸದರಿ ಆದೇಶವು ಹಣ ವಸೂಲಿಗಾಗಿ ಅಥವಾ ಹಣ ಪಾವತಿ ಮಾಡುವುದಕ್ಕಾಗಿ ಆಗಿದ್ದರೆ, ಆಗ ಅಂಥ ಆದೇಶಗಳನ್ನು ಭೂ ಕಂದಾಯ ಅಧಿನಿಯಮದ ಉಪಬಂಧಗಳಡಿ ಭೂ ಕಂದಾಯದ ಬಾಕಿಯಾಗಿ ಜಾರಿ ಮಾಡತಕ್ಕದ್ದು. ಆದುದರಿಂದ, ಶಾಸನವು ಈ ಆದೇಶಗಳ ಜಾರಿಗಾಗಿ ಉಪಬಂಧಿಸುತ್ತದೆ. ಅಧಿನಿಯಮದಡಿಯಲ್ಲಿನ ಪ್ರಾಧಿಕಾರಗಳು ಹೊರಡಿಸಿದ ಆದೇಶದ ವಿರುದ್ಧ ಅಪೀಲು ಅಥವಾ ಮೂಲ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಮತ್ತು ನ್ಯಾಯಾಧಿಕರಣದ ಅಡಿಯಲ್ಲಿ ರಚಿಸಲಾದ ಪ್ರಾಧಿಕಾರಗಳಿಂದ ಹೊರಡಿಸಲಾದ ಆದೇಶಗಳ ಜಾರಿಗಾಗಿ ಶಾಸನಾತ್ಮಕ ಪರಿಹಾರವನ್ನು ಪಕ್ಷಕಾರರಿಗೆ ಒಮ್ಮೆ ಕೊಟ್ಟರೆ, ನ್ಯಾಯಾಲಯದ ನಿಂದನಾ ಅಧಿನಿಯಮ, 1974ರ ಉಪಬಂಧಗಳಡಿ ಈ ನ್ಯಾಯಾಲಯವು ಸದರಿ ನಿಂದನಾ ಅರ್ಜಿಯನ್ನು ಪುರಸ್ಕರಿಸುವುದು ಅನುಚಿತವಾಗಿರುತ್ತದೆ. ಆದುದರಿಂದ, ಈ ನಿಂದನಾ ಅರ್ಜಿಯನ್ನು ಮೇಲೆ ಹೇಳಲಾದಂತೆ ಸೂಕ್ತ ವೇದಿಕೆಯನ್ನು ಸಂಪರ್ಕಿಸಲು ವಾದಿಗೆ ಸ್ವಾತಂತ್ರವನ್ನು ಮೀಸಲಿರಿಸಿ, ಈ ನಿಂದನಾ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಸೂಕ್ತ ವೇದಿಕೆಯನ್ನು ಸಂಪರ್ಕಿಸಲು ವಾದಿಗೆ ಸಾಧ್ಯವಾಗುವಂತೆ, ವಾದಿಯು ಸಲ್ಲಿಸಿದ ಆದೇಶದ ಪ್ರಮಾಣಿತ ಪ್ರತಿಯನ್ನು ಹಿಂದಿರುಗಿಸಲು 'ರಿಜಿಸ್ಟ್ರಿ'ಗೆ ನಿರ್ದೇಶಿಸಲಾಗಿದೆ.

---